## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## ಓ.ಎಸ್.114/2024

ಸಾಕ್ಷಿಯನ್ನು ದಿಃ **26.10.2024** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ-

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ. ಈ ದಿನ ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು,ಅವುಗಳನ್ನು,

| | |
|---|---|
| ನಿಪಿ.1 | ರೆಕಾರ್ಡ್ ಆಫ್ ರೈಟ್ಸ್ ದೃಢೀಕೃತ ನಕಲು |
| ನಿಪಿ.2 | ಇಂಡೆಕ್ಸ್ ಆಫ್ ಲ್ಯಾಂಡ್ಸ್ ದೃಢೀಕೃತ ನಕಲು |
| ನಿಪಿ.3 **ರಿಂದ 8** | **ಆರು** ಕೈಬರಹದ ಪಹಣಿ ಪತ್ರಿಕೆಗಳು |
| ನಿಪಿ.9 **ರಿಂದ 18** | **ಹತ್ತು** ಪಹಣಿ ಪತ್ರಿಕೆಗಳು |
| ನಿಪಿ.19 | **MR** ವಹಿಯ ಪ್ರತಿ |

ಎಂದು ಗುರುತಿಸಲಾಯಿತು.

ಪಾಟೀಸವಾಲುಃ 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎಸ್ ಅವರಿಂದ -

1. ಮೂರು ಜನ ವಾರಸುದಾರರಿದ್ದೇವೆ, ಮೂರು ಜನರಿಗೆ ಜಮೀನು ಭಾಗ ಮಾಡಿಕೊಡಬೇಕೆಂದು ಕೇಳಿ ಈ ದಾವೆ ಹೂಡಿರುತ್ತೇನೆ. ನಿಪಿ.19 ರ ದಾಖಲೆಯನ್ನು ನಾನೇ ಹಾಜರುಪಡಿಸುತ್ತೇನೆ ಎಂದರೆ ಸರಿ. ಈ ದಾವೆಯನ್ನು ಸರ್ವೇ ನಂ.201 ರಲ್ಲಿ 4 ಎಕರೆ 1 ಗುಂಟೆ, ಸರ್ವೇ ನಂ.93 ರಲ್ಲಿ 1 ಎಕರೆ 22 ಗುಂಟೆಗಳಲ್ಲಿ ಭಾಗ ಬರಬೇಕೆಂದು ಈ ದಾವೆ ಹೂಡಿರುತ್ತೇನೆ. ಈ ಜಮೀನುಗಳು ರಾಮೇನಹಳ್ಳಿ ಗ್ರಾಮಕ್ಕೆ ಸೇರಿವೆ.

2. ನಿಪಿ.19 ರ ದಾಖಲೆ ರೀತ್ಯಾ 1 ನೇ ಪ್ರತಿವಾದಿ ತಂದೆ ನನ್ನ ಅಣ್ಣ ಕಾಳನಾಯಕ ಅವರ ಹಿಸ್ಸೆಗೆ ದಾವ ಸರ್ವೇ ನಂ.198 ರಲ್ಲಿ 20 ಗುಂಟೆ, ಸರ್ವೇ ನಂ.201 ರ ಪೈಕಿ 30 ಗುಂಟೆ. 1 ನೇ ವಾದಿಯಾದ ಸಣ್ಣಕಾಳನಾಯಕ ಅವರ ನನ್ನ ಹಿಸ್ಸೆಗೆ ಸರ್ವೇ ನಂ.198 ರಲ್ಲಿ 21 ಗುಂಟೆ, ಸರ್ವೇ ನಂ.201 ರ ಪೈಕಿ 29 ಗುಂಟೆ ಹೋಗಿದೆ ಎಂದರೆ ಸರಿ. ಅದೇ ರೀತಿ 1 ನೇ ವಾದಿಯಾದ ಸಣ್ಣನಾಯಕ ನನ್ನ ಹಿಸ್ಸೆಗೆ ಸರ್ವೇ ನಂ.198 ರಲ್ಲಿ 21 ಗುಂಟೆ, ಸರ್ವೇ ನಂ.201 ರ ಪೈಕಿ 29 ಗುಂಟೆ ಬಂದಿರುತ್ತದೆ ಎಂದರೆ ಸರಿ. ನಿಪಿ.19 ರಲ್ಲಿ ಮೂಲಖಾತೆದಾರರಾದ ಪೌತಿ ಇವರ ಮಕ್ಕಳಾದ ಕಾಳನಾಯಕ, ಸಣ್ಣಕಾಳನಾಯಕ ಹಾಗೂ ಸಣ್ಣನಾಯಕ ಇವರಿಗೆ ಹಿಸ್ಸೆಯಂತೆ

ಅನುಭವದಂತೆ 1/3 ಭಾಗವಾಗಿ ಖಾತೆಯಾಗಲು ಮುಂದಿನ ಆದೇಶಕ್ಕಾಗಿ ಎಂಬ ವರದಿಯ ಆಧಾರದ ಮೇಲೆ ಪೌತಿ ಮೇರೆಗೆ ಹಿಸ್ಸೆ ಖಾತೆಯಾಗಿದೆ ಎಂದರೆ ಸರಿ.

3. ಈ ಪ್ರಕಾರ 25.03.1996 ರಲ್ಲಿ ನಾವು ದಾವ ಎರಡು ಐಟಂ ಸ್ವತ್ತುಗಳನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಿಪಿ.19 ರ ಮೇರೆಗೆ ಆದ ಖಾತೆ ಆದೇಶದಂತೆ ಆ ಸಮಯದಿಂದಲೂ ನಾವು ಪ್ರತ್ಯೇಕವಾಗಿ ಸ್ವತ್ತನ್ನು ಅನುಭವಿಸುತ್ತಾ ಬಂದಿದ್ದೇವೆ ಎಂದರೆ ಸರಿ. ಹೀಗೆ 1996 ರಲ್ಲಿ ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವ ಕಾರಣ ಈಗ ಪುನಃ ವಿಭಾಗ ಆಗುವ ಅವಶ್ಯಕತೆ ಇಲ್ಲ ಎಂದರೆ ಸರಿ.

4. ಈ ದಾವದಲ್ಲಿ ನನ್ನ ಅಣ್ಣ ಸಣ್ಣಕಾಳನಾಯಕ, ನಾನು ಮತ್ತು ಪ್ರತಿವಾದಿ ಸವೀಂದ್ರ ಆರ್. ಕೆ., ಮಹದೇವ ಆರ್.ಕೆ. ಇಷ್ಟು ಜನ ಮಾತ್ರ ಪಕ್ಷಗಾರರಾಗಿದ್ದೇವೆ ಎಂದರೆ ಸರಿ. ನಾನು ಈ ದಾವದಲ್ಲಿ ನಿಶಾನೆಯಾಗಿ ಗುರುತಿಸಿಕೊಂಡಿರುವ ಪಹಣಿ ಪತ್ರಿಕೆಗಳ ಪೈಕಿ ನಿಪಿ.10 ರಲ್ಲಿ ಇರುವ ಆರ್.ಟಿ.ಸಿ ಯಲ್ಲಿ ಕಾಳನಾಯಕ ಬಿನ್ ಸಣ್ಣನಾಯಕ ಮತ್ತು ಕೆಂಪಮ್ಮ ಕೋಂ ಸಣ್ಣನಾಯಕ ಇವರ ಹೆಸರಿನ ಜಂಟಿ ಖಾತೆಯ ಪಹಣಿ ಇದೆ ಎಂದರೆ ಸರಿ. ಕಾಳನಾಯಕ ಬಿನ್ ಸಣ್ಣನಾಯಕ ಮತ್ತು ಕೆಂಪಮ್ಮ ಕೋಂ ಸಣ್ಣನಾಯಕ ಇವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಸರಿ.

5. ನಿಪಿ.4 ರ ಪಹಣಿ ಪತ್ರಿಕೆ ಮೂಲ ಸರ್ವೇ ನಂ.201 ರಲ್ಲಿ ಕಾಶಿನಾಯಕ ಎಂಬ ಹೆಸರಿದೆ ಎಂದರೆ ಸರಿ. ಸದರಿ ಕಾಶಿನಾಯಕ ಎಂಬ ಹೆಸರಿದೆಯೇ ಹೊರತು ನನ್ನ ತಾತ ಕಾಳನಾಯಕ ಹೆಸರಿಲ್ಲ ಎಂದರೆ ಸರಿ. ಕಾಶಿನಾಯಕ ಅವರೆ ಬೇರೆ, ಕಾಳನಾಯಕ ಅವರೆ ಬೇರೆ ಎಂದರೆ ಸರಿ. ಅವರು ನಮ್ಮ ಜಮೀನಿನ ಪಕ್ಕದವರು ಎಂದು ನುಡಿಯುತ್ತಾರೆ. ಮೂಲ ಸರ್ವೇ ನಂ.201 ಕಾಶಿನಾಯಕ ಅವರ ಹೆಸರಿನಲ್ಲಿ ಇರುವುದರಿಂದ ಇದು ನಮ್ಮ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನಿಪಿ.5 ರ ಸರ್ವೇ ನಂ. 201 ರ ಪಹಣಿ ಪತ್ರಿಕೆಯಲ್ಲಿ ಸಹ ಕಾಶಿನಾಯಕ ಅವರ ಹೆಸರೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರು ಆ ರೀತಿ ಬಂದಿದೆ ಎಂದು ನನಗೆ ಓದಲು ಬರದ ಕಾರಣ ಹೇಳಲು ಬರುವುದಿಲ್ಲ. ಕಾಶಿನಾಯಕ ಹಾಗೂ ಕಾಳನಾಯಕ ಇಬ್ಬರು ಒಬ್ಬರೆ ಎಂದು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಕಾಶಿನಾಯಕ ಎಂದು ಇದ್ದುದ್ದನ್ನು ನಾನು ಕಾಳನಾಯಕ ಎಂದು ತಿದ್ದುಪಡಿಸಿದೆ ಎಂಬುದರ ಬಗ್ಗೆ ಸಹ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಕಾಶಿನಾಯಕ ಹಾಗೂ ಕಾಳನಾಯಕ ಇಬ್ಬರು ಒಂದೇ ಎಂದು ನಾನು ನನ್ನ ವಾದಪತ್ರದಲ್ಲಿ, ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಿಸಿ ಹಾಕಿಲ್ಲ ಎಂದರೆ ಸರಿ. ಆ ಕಾರಣ ಸರ್ವೇ ನಂ.201 ರ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

6. ಮಹದೇವ ನಾಯಕ ಆರ್.ಕೆ. ಬಿನ್ ಕರೀನಾಯಕ ರವರನ್ನು ನಾನು ಈ ದಾವೆಯಲ್ಲಿ 2 ನೇ ಪ್ರತಿವಾದಿಯಾಗಿ ಸೇರ್ಪಡೆ ಮಾಡಿದ್ದೇನೆ ಎಂದರೆ ನಾನು ಮಾಡಿಲ್ಲ. 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಕ್ರಯಪತ್ರವು ನಮ್ಮನ್ನು ಬದ್ದಪಡಿಸುವುದಿಲ್ಲ ನಾವು ಈ ದಾವದಲ್ಲಿ ಸುಳ್ಳು ಹೇಳಿದ್ದೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸ್ವತ್ತನ್ನು ಯಾವಾಗ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರಾದ ನಮ್ಮಗಳ ನಡುವೆ ಹಾಗೂ ನಮ್ಮ ಅಣ್ಣನ ಮಗ ಸವೀಂದ್ರ ಅವರ ನಡುವೆ ವಿಭಾಗ ಪತ್ರ ಆಗಿದೆ ಎಂದರೆ ಸರಿ. ಸದರಿ ವಿಭಾಗ ಪತ್ರವನ್ನು 1 ನೇ ಪ್ರತಿವಾದಿ ತಂದೆ ನೊಂದಣಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಅವರು ವಿಭಾಗ ಪತ್ರವನ್ನುನೊಂದಣಿ ಮಾಡಿಸಿಕೊಂಡಾಗ ನಾವು ತಕಾರಾರು ಮಾಡಿಲ್ಲ ಎಂದರೆ ಸರಿ. ಆ ವಿಚಾರ ಈಗ 2 ವರ್ಷಗಳ ಹಿಂದೆ ತಿಳಿಯಿತು. ಈ ದಾವೆ ಒಂದು ವರ್ಷದ ಹಿಂದೆ ಹಾಕಿದ್ದೇವೆ. 2 ವರ್ಷಗಳ ಹಿಂದೆ ತಿಳಿದು ಬಂದ ನಂತರ ಈ ದಾವೆ ಹಾಕುವ ದಿನಾಂಕದೊಳಗೆ ನಾನು ಸದರಿ ವಿಭಾಗ ಪತ್ರವನ್ನು ಪ್ರಶ್ನೆ ಮಾಡಿ ನಾನು ಯಾವುದೇ ಕ್ರಮ ಕೈಗೊಂಡಿಲ್ಲ.

7. 1996 ರಲ್ಲಿ ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವ ಕಾರಣ ಈಗ ಪುನಃ ಭಾಗ ಕೇಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಸಮಭಾಗ ಬರಬೇಕು ಎಂದು ಕೇಳಿದ್ದೇವೆ. ಯಾವ ರೀತಿ ಸಮ ಆಗಿಲ್ಲ ಎಂದು ಕೇಳಿದ್ದೇವೆ ಎಂದರೆ ನಮ್ಮ ತಂದೆ ತೆಗೆದುಕೊಂಡಿರುವ 4 ಎಕರೆ 1 ಗುಂಟೆ ಪೈಕಿ ಇನ್ನೂ 30 ಗುಂಟೆ ಜಮೀನಿದೆಯಲ್ಲ ಎಂದು ನುಡಿಯುತ್ತಾರೆ. ಸದರಿ ನಮ್ಮ ತಂದೆ ಖರೀದಿ ಮಾಡಿದ್ದಾರೆ ಎಂದು ಹೇಳುವ ಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ, ಅದು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ನಮ್ಮ ತಂದೆ ಕೊಂಡಿದ್ದರು ಎಂದು ನಾನು ಈಗ ಹೇಳುತ್ತಿರುವ ವಿಚಾರವನ್ನು ನನ್ನ ವಾದಪತ್ರದಲ್ಲಿ ಬರೆಯಿಸಿರುವುದಿಲ್ಲ. ಸದರಿ ಸ್ವತ್ತನ್ನು ನಮ್ಮ ತಂದೆ ಕೊಂಡು ಎಷ್ಟು ವರ್ಷಗಳಾಯಿತು ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.